ಈ) ಒಂದು ಸಾರಿ ಒಬ್ಬರಿಗೆ ಮಂಜೂರು ಮಾಡಿದ ಮೇಲೆ ಇನ್ನೊಬ್ಬರಿಗೆ ಜಮೀನು ಮಂಜೂರು ಮಾಡಲು ಸಾಧ್ಯವೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಮುದ್ದುರೇಶ್ವರ ಪುಡ್ಸ್ ಮತ್ತು ಎಕ್ಸ್‌ಪೋರ್ಟ್ ಲಿಮಿಟೆಡ್‌ರವರಿಗೆ ಕಾರವಾರ ಜಿಲ್ಲೆಯ ಕುಮಟ ಮತ್ತು ಆಂಕೋಲ ತಾಲ್ಲೂಕುಗಳಲ್ಲಿ 1818 ಎಕರೆ 16 ಗುಂಟೆ 8 ಆಣೆ ಜಮೀನನ್ನು ದಿನಾಂಕ 23.6.94ರಲ್ಲಿ ಮಂಜೂರು ಮಾಡಲಾಗಿದೆ.

ಆ) ಮೇಲ್ಕಾಣಿಸಿದ ಜಮೀನಿಗೆ ವಿಧಿಸಿರುವ ತಾತ್ಕಾಲಿಕ ಬೆಲೆಯು 54.94 ಲಕ್ಷ ರೂ. ಆಗಿರುತ್ತದೆ.

ಇ) ಇದಕ್ಕೆ ಮುಂಚೆ ಬಳ್ಳಾರ್‌ಪುರ್ ಇಂಡಸ್ಟ್ರೀಸ್ ಲಿಮಿಟೆಡ್‌ರವರಿಗೆ ಈ ಜಮೀನನ್ನು ಮಂಜೂರು ಮಾಡಲಾಗಿತ್ತು. ಮತ್ತು ಅದಕ್ಕೆ ಆ ಕಂಪನಿಯವರು ತಾತ್ಕಾಲಿಕ ದರದಲ್ಲಿ ಒಟ್ಟು 54.94 ಲಕ್ಷ ರೂ.ಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಲಿಗೆ ಪಾವತಿ ಮಾಡಿದ್ದರು.

ಈ) ಒಮ್ಮೆ ಮಂಜೂರಾದ ಭೂಮಿಯನ್ನು ಮಂಜೂರುದಾರರು ಕೈಗಾರಿಕೆಯನ್ನು ಸ್ಥಾಪಿಸಲು ತಪ್ಪಿದಲ್ಲಿ ಅಂತಹ ಭೂಮಿಯನ್ನು ಪುನರ್ ವಶಪಡಿಸಿಕೊಳ್ಳಲು ಮಂಡಳಿಯು ಅಧಿಕಾರವನ್ನು ಹೊಂದಿದೆ. ಕೈಗಾರಿಕೆಯ ಸ್ಥಾಪನೆಗೆ ನೀಡಿದ ಜಮೀನನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಮಂಜೂರುದಾರರು ಸ್ವತಃ ಸಂಪೂರ್ಣ ಭೂಮಿಯನ್ನು ಅಥವಾ ಉಪಯೋಗಿಸಲು ಸಾಧ್ಯವಾಗದ ಭಾಗಶಃ ಜಮೀನನ್ನು ಮಂಡಳಿಗೆ ಹಿಂದಿರುಗಿಸಲು ಅವಕಾಶವಿದೆಯೆಂದು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ವರದಿ ಮಾಡಿದೆ. ಇಂತಹ ಜಮೀನನ್ನು ಬೇರೆಯವರಿಗೆ ಕೈಗಾರಿಕೆ ಸ್ಥಾಪನೆಗಾಗಿ ಮಂಜೂರು ಮಾಡಲು ಅವಕಾಶವಿದೆ. ವಿಷಯವು ಉಚ್ಚ ನ್ಯಾಯಾಲಯದ ಮುಂದೆಯೂ ಸಹ ರಿಟ್ ಅರ್ಜಿ ಸಂಖ್ಯೆ: 22831-22832:94 ರಲ್ಲಿರುತ್ತದೆ.

ಟೀ ನರಸೀಪುರ ತಾಲ್ಲೂಕಿನಲ್ಲಿ ಕೈಗಾರಿಕಾ ಎಸ್ಟೇಟ್‌ಗಳ ನಿರ್ಮಾಣ

1837 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ತಾಲ್ಲೂಕು ಕೇಂದ್ರಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಲಾಗಿರುವವುಗಳ ಸಂಖ್ಯೆ ಎಷ್ಟು?

ಆ) ಉಳಿದ ತಾಲ್ಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?

ಇ) ಟೀ ನರಸೀಪುರ ತಾಲ್ಲೂಕಿನಲ್ಲಿ 1995-96ರಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಈ) ಹಾಗಿದ್ದಲ್ಲಿ, ಇದಕ್ಕಾಗಿ ವಿಚರ್ಚು ಮಾಡಲಿರುವ ಹಣದ ಪ್ರಮಾಣವೆಷ್ಟು?

ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) 105 ಕೈಗಾರಿಕಾ ಎಸ್ಟೇಟುಗಳು

ಆ) ಉಳಿದ 24 ತಾಲ್ಲೂಕುಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಭೂ ಸ್ವಾಧೀನತೆಯ ಕ್ರಮವು ಪ್ರಗತಿಯಲ್ಲಿದೆ.

ಇ) ಇಲ್ಲಾ

ಈ) ಉದ್ಭವಿಸುವುದಿಲ್ಲ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭ

1469 - ಡಾ॥ ಎಂ.ಪಿ: ಕರ್ಕಿ (ಕುಮ್ಟ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ತಂತ್ರಜ್ಞಾನ ಪರಿಸರ ಮಾಲಿನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಉತ್ತರ ಕನ್ನಡ ಜಿಲ್ಲೆಯ ಹಳಿಯೊಂದರಲ್ಲಿ ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಬಗ್ಗೆ ಕೆಲವು ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಸರ್ಕಾರ ಈ ಪ್ರಯತ್ನಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲವೆಂಬುದು ನಿಜವೆ;*

ಇ) *ಸಹಕಾರಿ ರಂಗದ ಬೇಡಿಕೆಯನ್ನು ಬದಿಗೊತ್ತಿ ಖಾಸಗಿ ರಂಗದಲ್ಲಿ ಅನುಮತಿ ನೀಡುವ ಯತ್ನವನ್ನು ಸರ್ಕಾರ ಮಾಡುತ್ತಿದೆಯೇ;*

ಈ) *ಹಾಗಿದ್ದಲ್ಲಿ ಖಾಸಗಿಯವರಿಗೆ ಪ್ರೋತ್ಸಾಹ ನೀಡಿ ಶಿಫಾರಸ್ಸು ಮಾಡುವ ಅಧಿಕಾರಿಗಳಾರು.*

ಉ) *ಹಾಗಿದ್ದಲ್ಲಿ ಸಹಕಾರಿ ರಂಗದಲ್ಲಿ ಈ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಯಂತ್ರ ಕಲೆ, ಪರಿಸರ ಹಾಗೂ ಜೀವಿಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು) :

ಅ) ಬಂದಿದೆ

ಆ) ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ಸಹಕಾರಿ ರಂಗದಲ್ಲಿ ಮೆ: ಮಲೆನಾಡು ಕಾಳಿಕಾಂಬ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ದಿನಾಂಕ 13-12-91 ರಂದು ಅರ್ಜಿ ಸಲ್ಲಿಸಿರುತ್ತದೆ. ಇದಕ್ಕೆ ಮುಂಚೆ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು 3 ಅರ್ಜಿಗಳು ಬಂದಿದ್ದು, ರಾಜ್ಯ ಪರಿಶೀಲನಾ ಸಮಿತಿಯು ದಿನಾಂಕ 7-8-90ರಂದು ನಡೆದ ಸಭೆಯಲ್ಲಿ ಈ 3 ಅರ್ಜಿಗಳ ಪೈಕಿ ಮೆ: ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿರವರ ಅರ್ಜಿಯನ್ನು ಅನುಮತಿ ಪತ್ರ ನೀಡುವಿಕೆಗಾಗಿ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿರ್ಣಯ ಕೈಗೊಂಡಿತು. ಇದರಂತೆ ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿಯವರ ಅರ್ಜಿಯನ್ನು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು. ನಂತರ ರಾಜ್ಯ ಪರಿಶೀಲನಾ ಸಮಿತಿಯ ದಿನಾಂಕ 17-1-92ರಂದು ನಡೆದ ಸಭೆಯಲ್ಲಿ ಈಗಾಗಲೇ ಮೆ: ಕೆ.ಎನ್. ಗುರುಸ್ವಾಮಿ ಅಂಡ್ ಕೂಪನಿಯವರ ಅರ್ಜಿ ಭಾರತ [illegible] ಶಿಫಾರಸ್ಸು ಮಾಡಿರುವುದರಿಂದ ಜಿಲ್ಲೆಯಲ್ಲಿ ಇನ್ನೊಂದು ಸಕ್ಕರೆ ಕಾರ್ಖಾನೆ [illegible] ಅವಕಾಶವಿಲ್ಲವೆಂದು ತೀರ್ಮಾನಿಸಿ ಮೆ: ಮಲೆನಾಡು ಕಾಳಿಕಾಂಬ ಸಹಕಾರಿ ಸಕ್ಕರೆ ಕಾರ್ಖಾನೆಯವರ ಅರ್ಜಿಯನ್ನು ಪರಿಗಣಿಸಿರುವುದಿಲ್ಲ. ಅರ್ಜಿದಾರರಿಗೆ ಈ ಸಂಬಂಧದಲ್ಲಿ ಹಿಂಬರಹವನ್ನು ನೀಡಲಾಗಿದೆ. ಸಹಕಾರಿ ಕ್ಷೇತ್ರದ ಉದ್ದೇಶಿತ ಸಹಕಾರ ಸಕ್ಕರೆ ಕಾರ್ಖಾನೆಯ ಅರ್ಜಿಯೂ ಸೇರಿದಂತೆ ತದನಂತರ ಮೆ: ಕೆ.ಎನ್. ಗುರುಸ್ವಾಮಿ ಅಂಡ್ ಕಂಪನಿರವರ ಅರ್ಜಿಯನ್ನು ಭಾರತ ಸರ್ಕಾರ ತಿರಸ್ಕರಿಸಿರುತ್ತದೆ. ಇದಾದ ನಂತರ ಸಹಕಾರಿ ಕ್ಷೇತ್ರದ ಉದ್ದೇಶಿತ ಸಹಕಾರ ಸಕ್ಕರೆ ಕಾರ್ಖಾನೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಸಹಕಾರಿ ಕಾಯ್ದೆ ಅಡಿಯಲ್ಲಿ ನೊಂದಣಿ ಮಾಡಿರುವುದಿಲ್ಲ. ಈ ಕಾರಣದಿಂದ ಸಹಕಾರಿ ಕ್ಷೇತ್ರದ ಉದ್ದೇಶಿತ ಕಾರ್ಖಾನೆಯ ಅರ್ಜಿಯನ್ನು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದಿಲ್ಲ. ಸರ್ಕಾರ ಸಹಕಾರಿ ಕ್ಷೇತ್ರದಲ್ಲಿ ಕಾರ್ಖಾನೆ ಸ್ಥಾಪಿಸುವುದಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲವೆಂಬುದು ನಿಜವಲ್ಲ.